ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಮಂಗಳವಾರ, ದಿನಾಂಕ : 15 ನೇ ಡಿಸೆಂಬರ್, 2020

ಕೋಲಾರ ನಗರಸಭೆ ಪೌರಾಯುಕ್ತರು/ಅಧಿಕಾರಿ/ನೌಕರರ ಕುಟುಂಬದಲ್ಲಿ ನಿಧನ ನಂತರದ ಸೌಲಭ್ಯ ಒದಗಿಸುವ ಬಗ್ಗೆ

ಡಾ|| ವೈ. ಎ. ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ) -

685 (837) ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ನಗರಸಭೆಗಳಲ್ಲಿ ಪೌರಾಯುಕ್ತರ ಹುದ್ದೆಯಿಂದ ಹಿಡಿದು ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿರುವ ಹಾಗೂ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರುಗಳಿಂದ ಆರ್ಥಿಕ ನಷ್ಟ ಉಂಟಾದಾಗ ಅವರುಗಳ ಮೇಲೆ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 100(2)ರ ಪ್ರಕಾರ ಆ ಅಧಿಕಾರಿ/ನೌಕರರು ನಿಧನ ಹೊಂದಿದ ನಂತರವೂ ವಿಚಾರಣೆ ನಡೆಸಲು ಅವಕಾಶವಿದೆಯೇ;

(ಆ) ಇಲ್ಲದಿದ್ದಲ್ಲಿ, ಕೋಲಾರ ನಗರಸಭೆಗೆ ಸಂಬಂಧಿಸಿದಂತೆ ಪೌರಾಯುಕ್ತರು ಹಾಗೂ ಇತರೆ ಅಧಿಕಾರಿಗಳು ಆರ್ಥಿಕ ನಷ್ಟ ಉಂಟು ಮಾಡಿದ್ದಾರೆಂದು ತಿಳಿಸಿ, ಅವರುಗಳ ಮೇಲೆ ಇಲಾಖಾ ವಿಚಾರಣೆ ಕೈಗೊಂಡ ನಂತರ ಅವರಲ್ಲಿ ಯಾರಾದರೂ ನಿಧನ ಹೊಂದಿದ್ದಲ್ಲಿ, ಅಂತಹ ಅಧಿಕಾರಿಗಳ ಮೇಲೆ ಇಲಾಖಾ ವಿಚಾರಣೆಯನ್ನು ಕೈಬಿಡಲಾಗಿದೆಯೇ;

(ಇ) ಕೋಲಾರ ನಗರಸಭೆಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಗೆ ಒಳಪಟ್ಟ ಪೌರಾಯುಕ್ತರು/ಅಧಿಕಾರಿಗಳು ನಿಧನ ಹೊಂದಿದ ನಂತರ ಅವರ ಕುಟುಂಬಕ್ಕೆ ನಿಧನ ನಂತರದ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗಿದೆಯೇ; ಇಲ್ಲದಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು; ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮಗಳಲ್ಲಿ ಈ ರೀತಿಯಾಗಿ ಅಧಿಕಾರಿ/ನೌಕರರಿಗೆ ನಿಧನ ನಂತರದ ಸೌಲಭ್ಯಗಳನ್ನು ಅವರ ಕುಟುಂಬದವರಿಗೆ ಬಿಡುಗಡೆ ಮಾಡಲು ಇರುವ ಮಾನದಂಡಗಳೇನು; (ಆದೇಶದ ಪ್ರತಿಗಳನ್ನು ಒದಗಿಸುವುದು)

(ಈ) ಕೋಲಾರ ನಗರಸಭೆಯಲ್ಲಿ ಕಳೆದ 10 ವರ್ಷಗಳಿಂದ ಕೆ.ಎಸ್.ಎಸ್.ಐ.ಐ.ಡಿ.ಸಿ. ವತಿಯಿಂದ ನಿಯೋಜನೆ ಮೇರೆಗೆ ಪೌರಯುಕ್ತರಾಗಿ/ನೌಕರರಾಗಿ ಕಾರ್ಯನಿರ್ವಹಿಸಿದವರ ವಿವರ ನೀಡುವುದು; ಹಾಗೂ ಮಾತೃ ಇಲಾಖೆಗೆ ಹಿಂದಿರುಗಿ ನಂತರ ಅವರು ನಿಧನ ಹೊಂದಿದ್ದಲ್ಲಿ, ಅವರ ಕುಟುಂಬದವರಿಗೆ ಆರ್ಥಿಕ ಸೌಲಭ್ಯ ಬಿಡುಗಡೆ ಮಾಡುವ ಸಲುವಾಗಿ ಕೋಲಾರ ನಗರಸಭೆಯಿಂದ ಅವರ ಮಾತೃ ಇಲಾಖೆಗೆ ಎನ್.ಒ.ಸಿ ನೀಡಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳ ಸಮೇತ ಮಾಹಿತಿ ಒದಗಿಸುವುದು?